# HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## MAIN WRITTEN EXAMINATION FOR RECRUITMENT TO THE POST OF DISTRICT JUDGES
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗೆ ನೇಮಕಾತಿಯ ಮುಖ್ಯ ಲಿಖಿತ ಪರೀಕ್ಷೆ

## CIVIL LAW
ದಿವಾಣಿ ಕಾನೂನು

## QUESTION PAPER
ಪ್ರಶ್ನೆ ಪತ್ರಿಕೆ

**Date: 04.03.2023**
ದಿನಾಂಕ: 04.03.2023

**Max. Marks: 150**
ಗರಿಷ್ಠ ಅಂಕಗಳು: 150

**TIME: 02-00 pm to 05.00 pm**
ಸಮಯ: ಮಧ್ಯಾಹ್ನ 02.00 ರಿಂದ 05.00 ಘಂಟೆ

**INSTRUCTIONS TO THE CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು:

1) The candidates should note Rule 5(b) of the Karnataka Judicial Service (Recruitment) (Amendment) Rules, 2016 that reads as under:

***Main Examination:***

***The Competitive Written Examination for recruitment of District Judges shall consist of:-***

*(i)* ***Written Examination of two papers each of three hours duration with 150 maximum marks of each paper-one in Civil Law and another in Criminal Law.***

*(ii)* ***It is compulsory for all candidates to answer at least one of the papers in English language and in so far as the other paper is concerned, it shall be optional for the candidates to answer the same either in English or in Kannada in which event the said paper shall be answered entirely in the language in which option is exercised.***

1) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು 2016ರ ನಿಯಮ 5(ಬಿ)ಯನ್ನು ಈ ಕೆಳಗಿನಂತೆ ಓದಲಾಗುವುದು ಎಂದು ಅಭ್ಯರ್ಥಿಗಳು ಗಮನಿಸತಕ್ಕದ್ದು:

*ಮುಖ್ಯ ಪರೀಕ್ಷೆ:*

***ಜಿಲ್ಲಾ ನ್ಯಾಯಾಧೀಶರ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ಒಳಗೊಂಡಿದ್ದು:-***

***(i)*** ***ಲಿಖಿತ ಪರೀಕ್ಷೆಯು ಎರಡು ಪತ್ರಿಕೆಯದಾಗಿದ್ದು ತಲಾ ಮೂರು ಗಂಟೆ ಅವಧಿಯ ಪ್ರತಿ ಪತ್ರಿಕೆಯು 150 ಗರಿಷ್ಟ ಅಂಕಗಳು ಉಳ್ಳದ್ದು - ಒಂದು ದಿವಾಣಿ ಕಾನೂನು ಮತ್ತೊಂದು ಅಪರಾಧಿಕ ಕಾನೂನುದಾಗಿರುತ್ತದೆ.***

*(ii)* ***ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಕನಿಷ್ಟ ಪಕ್ಷ ಒಂದು ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕಾಗುವುದು ಮತ್ತು ಮತ್ತೊಂದು ಪತ್ರಿಕೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ, ಆ ಸಂದರ್ಭದಲ್ಲಿ ಆ ಪತ್ರಿಕೆಯನ್ನು ಪೂರ್ತಿ ಆಯ್ಕೆ ಮಾಡಿದ ಭಾಷೆಯಲ್ಲಿ ಉತ್ತರಿಸತಕ್ಕದ್ದು.***

*2) If there is any difference in the question in English language and Kannada language, the question framed in English language shall prevail.*

*ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.*

*3). Write your register number only on the cover page of the answer book in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.*

*ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.*

**1. Translate the following passage as extracted from a Deposition to Kannada language:** **15 Marks**

ಈ ಕೆಳಕಂಡ ಸಾಕ್ಷಿ ಹೇಳಿಕೆಯ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ. **15 ಅಂಕಗಳು**

It is true that I have filed the present suit claiming the suit amount after deducting the security deposit. It is true that as per

the lease deed, the lessee had agreed to be in possession of the schedule premises till December 2023. It is true that, in the notice dated 13.04.2020 defendant company has informed me about the termination of tenancy with immediate effect. It is true that, we have issued a reply by way of e-mail stating that schedule premises require certain repairs and it should be handed over in good condition. It is false to suggest that I have not made any communication in writing to the defendant for return of keys. I have stated in my plaint and affidavit evidence that for want of registered discharge deed, prospective tenants did not come forward to take the premises on lease. I have no document to show that repairs were not done as per expectation or specification and same is communicated to the defendant. It is false to suggest that whatever the claim made in the plaint is without any basis and as such the plaintiff is not entitle the same.

**2. Translate the following passage as extracted from a Judgment to English language:** **15 Marks**

**ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:** **15 ಅಂಕಗಳು**

ಈ ನ್ಯಾಯಾಲಯ ಮತ್ತು ಇತರ ನ್ಯಾಯಾಲಯಗಳ ತೀರ್ಪುಗಳನ್ನು ಸರಿಯಾಗಿ ವಿಶ್ಲೇಷಣೆ ಮಾಡಿ ಪರಿಶೀಲಿಸಿದಾಗ ಮಾನಸಿಕ ಕ್ರೌರ್ಯದ ಯಾವುದೇ ಸಮಗ್ರ ವ್ಯಾಖ್ಯಾನವು ಎಲ್ಲಾ ರೀತಿಯ ಮಾನಸಿಕ ಕ್ರೌರ್ಯದ ಪ್ರಕರಣಗಳನ್ನು ಒಳಗೊಳ್ಳಲು ಸಾಧ್ಯವಿಲ್ಲ ಎಂದು ನಾವು ಖಚಿತವಾದ ತೀರ್ಮಾನಕ್ಕೆ ಬಂದಿರುತ್ತೇವೆ. ನಮ್ಮ ದೃಷ್ಟಿಕೋನದಲ್ಲಿ ಯಾವುದೇ ನ್ಯಾಯಾಲಯವು ಮಾನಸಿಕ ಕ್ರೌರ್ಯದ ಸಮಗ್ರ ವ್ಯಾಖ್ಯಾನವನ್ನು ನೀಡುವ ಪ್ರಯತ್ನ ಮಾಡಬಾರದು.

ಮಾನವನ ಮನಸ್ಸು ಅತ್ಯಂತ ಸಂಕೀರ್ಣವಾಗಿದೆ ಮತ್ತು ಮಾನವನ ನಡವಳಿಕೆಯು ಅಷ್ಟೇ ಜಟಿಲವಾಗಿದೆ. ಅದೇ ರೀತಿ ಮಾನವನ ಜಾಣ್ಮೆಗೆ ಯಾವುದೇ ಮಿತಿ ಇಲ್ಲ. ಆದುದರಿಂದ ಮಾನವನ ಪೂರ್ತಿ ನಡವಳಿಕೆಯನ್ನು ಒಂದೇ ವ್ಯಾಖ್ಯಾನದಲ್ಲಿ ಸಂಯೋಜಿಸುವುದು ಅಸಾಧ್ಯವಾಗಿದೆ. ಒಂದು

ಪ್ರಕರಣದಲ್ಲಿನ ಕ್ರೌರ್ಯವು ಇನ್ನೊಂದು ಪ್ರಕರಣದಲ್ಲಿ ಕ್ರೌರ್ಯ ಆಗದೇ ಇರಬಹುದು. ಕ್ರೌರ್ಯದ ಪರಿಕಲ್ಪನೆಯು ವ್ಯಕ್ತಿಯಿಂದ ವ್ಯಕ್ತಿಗೆ ಬಿನ್ನವಾಗಿರುತ್ತದೆ. ಅದು ಆ ವ್ಯಕ್ತಿಯ ಶೈಕ್ಷಣಿಕ, ಕೌಟುಂಬಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಿತಿ, ಪದ್ಧತಿಗಳು, ಸಂಪ್ರದಾಯಗಳು, ಧಾರ್ಮಿಕ ನಂಬಿಕೆಗಳು ಮತ್ತು ಮಾನವ ಮೌಲ್ಯಗಳನ್ನು ಅವಲಂಬಿಸಿರುತ್ತವೆ.

ಇದರ ಹೊರತಾಗಿ ಮಾನಸಿಕ ಕ್ರೌರ್ಯದ ಪರಿಕಲ್ಪನೆಯು ಸ್ಥಿರವಾಗಿ ಉಳಿಯಲು ಸಾಧ್ಯವಿಲ್ಲ. ಆಧುನಿಕ ಸಂಸ್ಕೃತಿಯ ಪ್ರಭಾವ, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಮತ್ತು ಮೌಲ್ಯ ವ್ಯವಸ್ಥೆ ಇತ್ಯಾದಿಗಳ ಮೂಲಕ ಸಮಯಕ್ಕನುಸಾರವಾಗಿ ಇದು ಬದಲಾವಣೆಗೆ ಒಳಪಡುತ್ತದೆ. ಈಗ ಮಾನಸಿಕ ಕ್ರೌರ್ಯವಾಗಿರುವಂತದ್ದು ಕಾಲಾನಂತರ ಮಾನಸಿಕ ಕ್ರೌರ್ಯವಾಗಿ ಉಳಿಯದೆ ಇರಬಹುದು.

**3.** Explain "Issue of fact", Issue of law" and "Issue of law and fact" with three examples each. **10 Marks**

"ಸಂಗತಿಯ ವಿವಾದಾಂಶಗಳು", "ಕಾನೂನಿನ ವಿವಾದಾಂಶಗಳು" ಮತ್ತು "ಸಂಗತಿಯ ಮತ್ತು ಕಾನೂನಿನ ವಿವಾದಾಂಶಗಳು" ಇವುಗಳನ್ನು ತಲಾ ಮೂರು ಉದಾಹರಣೆಗಳೊಂದಿಗೆ ವಿವರಿಸಿ. **10 ಅಂಕಗಳು**

**4.** What are the distinctive features of the Right to Fair Compensation and Transparency in Land Acquisition, Rehabilitation and Resettlement Act, 2013, when compared to the provisions of the Land Acquisition Act, 1894? **10 Marks**

ಭೂಸ್ವಾಧೀನ ಕಾಯಿದೆ, 1894ರ ನಿಬಂಧನೆಗಳಿಗೆ ಹೋಲಿಸಿದಾಗ, ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವಸಾಹತು ಕಾಯಿದೆ, 2013ರ ವಿಶಿಷ್ಟ ಲಕ್ಷಣಗಳು ಯಾವುವು? **10 ಅಂಕಗಳು**

**5.** Explain the provisions of the Karnataka Court Fees and Suit Valuation Act, 1958 regarding the payment of Court fees in respect of suit for Declaration, suit for Partition and suit for Specific Performance. **10 Marks**

ಘೋಷಣೆಗೆ ದಾವೆ, ಪಾಲು ದಾವೆ ಮತ್ತು ನಿರ್ದಿಷ್ಟ ಪರಿಪಾಲನಾ ದಾವೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಶುಲ್ಕ ಪಾವತಿಯ ಕುರಿತು ಕರ್ನಾಟಕ ನ್ಯಾಯಾಲಯದ ಶುಲ್ಕ ಮತ್ತು ದಾವಾ ಮೌಲ್ಯಮಾಪನ ಕಾಯಿದೆ 1958ರ ನಿಬಂಧನೆಗಳನ್ನು ವಿವರಿಸಿ. **10 ಅಂಕಗಳು**

**6.** State the circumstances under which owner of the Land/Building have recourse to evict the person in occupation under the following Acts, with reference to specific provisions: **10 Marks**

a) The Transfer of Property Act, 1882.

b) The Karnataka Rent Act, 1999.

c) The Specific Relief Act, 1963.

ಈ ಕೆಳಗಿನ ಕಾಯಿದೆಗಳ ಅಡಿಯಲ್ಲಿ ಜಮೀನು/ಕಟ್ಟಡದ ಸ್ವಾಧೀನದಲ್ಲಿರುವವರನ್ನು ಹೊರ ಹಾಕಲು ಅದರ ಮಾಲೀಕನಿಗೆ ಒದಗಿಬರುವ ಸಂದರ್ಭಗಳನ್ನು ಅವುಗಳ ನಿರ್ದಿಷ್ಟ ನಿಬಂಧನೆಗಳನ್ನು ಉಲ್ಲೇಖಿಸಿ ತಿಳಿಸಿ: **10 ಅಂಕಗಳು**

ಎ) ಸ್ವತ್ತು ವರ್ಗಾವಣೆ ಅಧಿನಿಯಮ, 1882

ಬಿ) ಕರ್ನಾಟಕ ಬಾಡಿಗೆ ಅಧಿನಿಯಮ, 1999

ಸಿ) ನಿರ್ದಿಷ್ಟ ಪರಿಹಾರ ಅಧಿನಿಯಮ, 1963

**7.** Briefly explain the following with regard to the Arbitration and Conciliation Act, 1996: **10 Marks**

a) Arbitration Agreement and its Form and essential requirements.

b) Power to refer the parties to arbitration

c) Interim measures by the Court in an Arbitral Proceedings.

ಮಧ್ಯಸ್ತಿಕೆ ಮತ್ತು ಸಂಧಾನ ಅಧಿನಿಯಮ, 1996ರಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ: **10 ಅಂಕಗಳು**

ಎ) ಮಧ್ಯಸ್ತಿಕ ಕರಾರು ಮತ್ತು ಅದರ ನಮೂನೆ ಮತ್ತು ಅಗತ್ಯ ಅವಶ್ಯಕತೆಗಳು.

ಬಿ) ಪಕ್ಷಗಾರರನ್ನು ಮಧ್ಯಸ್ತಿಕೆಗೆ ಉಲ್ಲೇಖಿಸುವ ಅಧಿಕಾರ.

ಸಿ) ಮಧ್ಯಸ್ತಿಕ ಪ್ರಕರಣದಲ್ಲಿ ನ್ಯಾಯಾಲಯದ ಮಧ್ಯಂತರ ಕ್ರಮಗಳು.

**8. a)** Name **ANY FIVE** grounds available to a woman married under Muslim Law for obtaining a decree for the dissolution of her marriage under Section 2 of the Dissolution of Muslim Marriages Act, 1939 **1 X 5= 05 Marks**

**b)** Name **ANY FIVE** conditions to be complied for valid adoption as per Section 11 of the Hindu Adoption and Maintenance Act, 1956 **1 X 5= 05 Marks**

ಎ) ಮುಸ್ಲಿಂ ವಿವಾಹ ವಿಘಟನಾ ಕಾಯಿದೆ, 1939ರ ಕಲಂ 2ರ ಅಡಿಯಲ್ಲಿ ಮುಸ್ಲಿಂ ಕಾನೂನಿನ ಅಡಿಯಲ್ಲಿ ವಿವಾಹವಾದ ಮಹಿಳೆಗೆ ತನ್ನ ವಿವಾಹದ ವಿಘಟನಾ ಡಿಕ್ರಿಯನ್ನು ಪಡೆಯಲು ಲಭ್ಯವಿರುವ **ಯಾವುದಾದರು ಐದು** ಆಧಾರಗಳನ್ನು ಹೆಸರಿಸಿ. **1 X 5 = 05 ಅಂಕಗಳು**

ಬಿ) ಹಿಂದು ದತ್ತಕ ಮತ್ತು ಜೀವನಾಂಶ ಕಾಯಿದೆ, 1956ರ ಕಲಂ 11ರ ಪ್ರಕಾರ ಮಾನ್ಯವಾದ ದತ್ತಕಕ್ಕೆ ಅನುಸರಿಸಬೇಕಾದ **ಯಾವುದಾದರು ಐದು** ಷರತ್ತುಗಳನ್ನು ಹೆಸರಿಸಿ. **1 X 5 = 05 ಅಂಕಗಳು**

**9.** How the Public Interest Litigations helped in protecting the Fundamental Rights in India? Name any five Public Interest Litigations, which changed the course of India. **10 Marks**

ಭಾರತದಲ್ಲಿ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸಲು ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳು ಯಾವ ರೀತಿ ಸಹಾಯವಾಗಿದೆ? ಭಾರತದ ದಿಕ್ಕನ್ನೆ ಬದಲಾಯಿಸಿದ ಯಾವುದಾದರು ಐದು ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳನ್ನು ಹೆಸರಿಸಿ. **10 ಅಂಕಗಳು**

**10.** State the meaning of following legal maxims: **10 Marks**

a) Volenti non fit injuria.

b) Qui facit per alium, facit per se.

c) Ignorantia juris non excusant.

d) Falsus in uno falsus in omnibus.

e) Actio personalis moritur cum persona

ಈ ಕೆಳಗಿನ ಕಾನೂನು ಸೂತ್ರಗಳ ಅರ್ಥವನ್ನು ತಿಳಿಸಿ: **10 ಅಂಕಗಳು**

ಎ) ವಾಲೆಂಟಿ ನಾನ್ ಫಿಟ್ ಇಂಜುರಿಯ

ಬಿ) ಕ್ಯೂ ಫೇಸಿಟ್ ಪರ್ ಅಲಿಯಂ, ಫೇಸಿಟ್ ಪರ್ ಸೆ.

ಸಿ) ಇಗ್ನೋರೆಂಷಿಯ ಜ್ಯೂರಿಸ್ ನಾನ್ ಎಕ್ಸ್‌ಕ್ಯೂಸಂಟ್

ಡಿ) ಫಾಲ್ಸಸ್ ಇನ್ ಉನೊ ಫಾಲ್ಸಸ್ ಇನ್ ಒಮಿನಿಬಸ್

ಇ) ಆಕ್ಟಿಯೊ ಪರ್‌ಸೊನಲಿಸ್ ಮಾರಿಟರ್ ಕಂ ಪರ್‌ಸೋನ

**11.** Mr. Suresh, aged 42 years, a carpenter by profession, met with an accident and sustained fracture on his right leg with 60% permanent disability. Mr Suresh was earning Rs.25,000/- per month and hospitalized for two months and incurred medical **15 Marks**

expenses of Rs.3,25,000/- and bed ridden for another four months. Mr. Suresh filed a petition under Section 166 of the Motor Vehicles Act, 1988 claiming compensation. Determine with reasons the amount of compensation to be awarded to Mr. Suresh under different heads.

ಬಡಗಿ ವೃತ್ತಿ ಮಾಡುತ್ತಿದ್ದ 42 ವರ್ಷ ವಯಸ್ಸಿನ ಶ್ರೀ ಸುರೇಶ್ ಒಂದು ಅಪಘಾತಕ್ಕೆ ಒಳಪಟ್ಟು ಆತನ ಬಲಗಾಲ ಮೂಳೆ ಮುರಿತ ಉಂಟಾಗಿ ಶೇಕಡ 60ರಷ್ಟು ಶಾಶ್ವತ ಅಂಗವೈಕಲ್ಯ ಉಂಟಾಗಿತ್ತು. ಶ್ರೀ ಸುರೇಶ್ ತಿಂಗಳ 25,000/– ರೂಪಾಯಿ ಸಂಪಾದಿಸುತಿದ್ದನು ಮತ್ತು ಆತನು ಎರಡು ತಿಂಗಳುಗಳ ಕಾಲ ಆಸ್ಪತ್ರೆಗೆ ದಾಖಲಾಗಿ ರೂ.3,25,000/– ವೈದ್ಯಕೀಯ ಖರ್ಚುವೆಚ್ಚಗಳಾಗಿ ಮತ್ತು ಇನ್ನು ನಾಲ್ಕು ತಿಂಗಳುಗಳ ಕಾಲ ಹಾಸಿಗೆ ಹಿಡಿದಿದ್ದನು. ಶ್ರೀ ಸುರೇಶ್ ಪರಿಹಾರ ಕೋರಿ ಮೋಟಾರು ವಾಹನ ಕಾಯಿದೆ, 1988ರ ಕಲಂ 166ರ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದನು. ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಸುರೇಶನಿಗೆ ನೀಡಬಹುದಾದ ಪರಿಹಾರವನ್ನು ಕಾರಣ ಸಹಿತ ನಿರ್ಧರಿಸಿ. **15 ಅಂಕಗಳು**

**12. Write a judgment on the basis of following facts by assuming that you are the judge of a Court of First Appeal:** **25 Marks**

*Note: a) The facts should be presumed and stated in brief and not reproduced verbatim*

*b) It should be presumed that necessary witnesses have been examined and necessary and relevant documents have been produced to support the case.*

****

The plaintiff filed the suit praying for a decree for Specific Performance by directing the defendant to execute the registered sale deed in his favour on the basis of the Agreement to Sell dated 23.03.2018.

The defendant in his written statement has admitted the sale transaction, execution of an Agreement to sell and also receipt of the sale advance amount from the plaintiff. The contention of the

defendant is that the plaintiff is/was not ready to perform his part of the contract by paying the balance sale consideration amount in time and the plaintiff has also not pleaded in the plaint about his readiness and willingness to perform his part of the contract. Hence, plaintiff is not entitled for the decree for specific performance. On these grounds the defendant prayed for dismissal of the suit with costs.

The trial Court framed the issues and after considering the oral and documentary evidence of both the parties, the trial court held that the plaintiff's readiness and willingness to perform his part of the contract was not pleaded in the plaint and any evidence let in by the plaintiffs regarding his readiness and willingness to perform his part of the contract can not be considered without pleadings. On the said ground, the trial court held that the plaintiff is not entitled for the decree for specific performance. Since the plaintiff has not claimed the relief for refund of sale advance, the trial Court proceeded to dismiss the suit.

Being aggrieved by the said judgment, the plaintiff preferred an appeal and challenged the legality and correctness of the impugned judgment on the ground that as per the Amendment brought to Section 16 of the Specific Relief Act, 1963, vide Amended Act, 2018, now the plaintiff's readiness and willingness to perform his part of the contract need not be averred in the plaint and only proof is sufficient. According to the Appellant/plaintiff, there is sufficient evidence to prove his readiness and willingness, which was not considered by the trial Court. The Appellant/plaintiff, alternatively, contended that even if his

readiness and willingness to perform his part of the contract is not proved and if is found that the plaintiff is not entitled for the decree for specific performance, still the trial Court was not justified in dismissing the suit, because if the plaintiff is not entitled for the decree for specific performance, he is entitled for the relief for refund of sale advance. The Appellant/plaintiff further contended that even though the plaintiff has not specifically prayed for relief for refund of the sale advance as an alternative relief, even then the trial Court is empowered to grant the same by invoking Order 7 Rule 7 of Code of Civil Procedure 1908, by moulding the relief, as the relief for refund of Sale advance is a lesser relief than the relief for Specific Performance. On these grounds, appellant/plaintiff prayed to set aside the impugned judgment and to decree the suit.

Where as, in justifying the impugned judgment, the respondent/defendant contended that the Amended Act, 2018 to the Specific Relief Act, 1963 is not applicable to the present suit, as the sale agreement was executed before the introduction of the Amended Act, 2018, which has no retrospective application. Therefore, the trial Court was right in holding that the plaintiff's readiness and willingness can not be accepted in the absence of specific pleadings in this regard. The respondent/defendant further contended that when the plaintiff has not specifically claimed the relief for refund of sale advance amount as an alternative prayer, the trial court could not have granted the same, as no Court can grant a relief which is not prayed for. It was further contended by the respondent/defendant that even as per Sec.22(2) of the Specific Relief Act, 1963, if the relief for refund of earnest money is not claimed as an alternative relief, it can not be granted. On all these

grounds, respondent/defendant prayed for dismissal of the appeal with costs.

Decide the Appeal in the light of the amendment brought to the Specific Relief Act, 1963, vide Amended Act, 2018 and decision of the Honb'le Supreme Court in **Smt.Katta Sujatha Reddy and another vs Siddamsetty Infra Projects Pvt. Limited (Civil Appeal No.5822/2022)**

**ಈ ಕೆಳಗಿನ ಸಂಗತಿಗಳ ಆಧಾರದ ಮೇಲೆ ನೀವು ಮೊದಲನೇ ಮೇಲ್ಮನವಿ ನ್ಯಾಯಾಲಯದ ನ್ಯಾಯಾಧೀಶರು ಎಂದು ಭಾವಿಸಿ ತೀರ್ಪು ಬರೆಯಿರಿ:** **25 ಅಂಕಗಳು**

**ಸೂಚನೆ:** *ಎ) ಸಂಗತಿಗಳನ್ನು ಭಾವಿಸಿ ಸಂಕ್ಷಿಪ್ತವಾಗಿ ಹೇಳತಕ್ಕದ್ದು ಮತ್ತು ಶಬ್ದಶಃ ಪುನರುತ್ಪಾದನೆ ಮಾಡಬಾರದು*

*ಬಿ) ಪ್ರಕರಣವನ್ನು ಸಮರ್ಥಿಸುವ ಎಲ್ಲಾ ಅಗತ್ಯ ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದಾರೆಂದು ಮತ್ತು ಅಗತ್ಯ ಮತ್ತು ಸುಸಂಬದ್ಧ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆಂದು ಭಾವಿಸತಕ್ಕದ್ದು.*

*****

ವಾದಿಯು ದಿನಾಂಕ 23.03.2018ರ ಖರೀದಿ ಕರಾರು ಪತ್ರದ ಆಧಾರದ ಮೇಲೆ ತನ್ನ ಪರವಾಗಿ ನೊಂದಾಯಿತ ಖರೀದಿ ಪತ್ರವನ್ನು ಬರೆದು ಕೊಡಬೇಕು ಎಂದು ಪ್ರತಿವಾದಿಗೆ ನಿರ್ದೇಶನ ಕೋರಿ ನಿರ್ದಿಷ್ಟ ಪರಿಪಾಲನಾ ದಾವೆಯನ್ನು ಮಾಡಿದ್ದರು.

ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಖರೀದಿ ವ್ಯವಹಾರವನ್ನು, ಖರೀದಿ ಕರಾರು ಪತ್ರವನ್ನು ಬರೆದು ಕೊಟ್ಟಿರುವುದನ್ನು ಮತ್ತು ವಾದಿಯಿಂದ ಮುಂಗಡ ಖರೀದಿ ಹಣವನ್ನು ಪಡೆದುಕೊಂಡಿರುವುದನ್ನು ಒಪ್ಪಿಕೊಂಡಿದ್ದನು. ಪ್ರತಿವಾದಿಯ ಪ್ರಕಾರ ವಾದಿಯು ಖರೀದಿ ಹಣದ ಬಾಕಿ ಉಳಿದ ಮೊತ್ತವನ್ನು ನಿಗದಿತ ಸಮಯದಲ್ಲಿ ಪಾವತಿ ಮಾಡಿ ಕರಾರಿನ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ಸಿದ್ದನಿರಲಿಲ್ಲ ಮತ್ತು ವಾದಿಯು ತಾನು ಕರಾರಿನ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ತಾನು ಯಾವತ್ತೂ ಸಿದ್ದನಿದ್ದೆ ಮತ್ತು ಇಚ್ಛೆಯುಳ್ಳವನಾಗಿದ್ದೆ ಎಂದು ವಾದ ಪತ್ರದಲ್ಲಿ ಹೇಳಿಕೊಂಡಿಲ್ಲ. ಆದುದರಿಂದ ವಾದಿಯು ನಿರ್ದಿಷ್ಟ ಪರಿಪಾಲನಾ ಡಿಕ್ರಿಯನ್ನು ಪಡೆಯಲು ಅರ್ಹನಿರುವುದಿಲ್ಲ. ಆ ಕಾರಣದಿಂದ ಪ್ರತಿವಾದಿಯು ದಾವಾವನ್ನು ಖರ್ಚುಸಹಿತ ವಜಾ ಮಾಡಲು ಕೋರಿಕೊಂಡಿದ್ದನು.

ವಿಚಾರಣಾ ನ್ಯಾಯಾಲಯವು ವಿವಾದಾಂಶಗಳನ್ನು ರಚಿಸಿ ಉಭಯ ಪಕ್ಷಗಾರರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಪರಿಗಣಿಸಿ ವಾದಿಯು ಕರಾರಿನ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ಸಿದ್ಧನಿದ್ದ ಮತ್ತು ಇಚ್ಛೆಯುಳ್ಳವನಾಗಿದ್ದ ಎಂಬುದನ್ನು ವಾದ ಪತ್ರದಲ್ಲಿ ಹೇಳಿಕೊಂಡಿಲ್ಲ ಮತ್ತು ವಾದಿಯು ಕರಾರಿನ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ಸಿದ್ದನಿದ್ದ ಮತ್ತು ಇಚ್ಛೆಯುಳ್ಳವನಾಗಿದ್ದ ಎನ್ನುವ ಬಗ್ಗೆ ವಾದಿಯು ಹಾಜರು ಪಡಿಸಿರುವ ಸಾಕ್ಷ್ಯವನ್ನು ವಾದ ಪತ್ರದಲ್ಲಿ ಇಲ್ಲದೆ ಪರಿಗಣಿಸಲಾಗುವುದಿಲ್ಲ ಎಂದು ಅಭಿಪ್ರಾಯ ಪಟ್ಟಿತ್ತು. ಆ ಕಾರಣದಿಂದ ವಿಚಾರಣಾ ನ್ಯಾಯಾಲಯವು ವಾದಿಯು ನಿರ್ದಿಷ್ಟ ಪರಿಪಾಲನಾ ಡಿಕ್ರಿಗೆ ಅರ್ಹನಲ್ಲ ಎಂದು ಅಭಿಪ್ರಾಯ ಪಟ್ಟಿತ್ತು. ವಾದಿಯು ಖರೀದಿ ಮುಂಗಡ ಹಣವನ್ನು ಮರುಪಾವತಿಯ ಪರಿಹಾರವನ್ನು ಕೇಳಿಲ್ಲವಾದ್ದರಿಂದ ವಿಚಾರಣಾ ನ್ಯಾಯಾಲಯವು ದಾವೆಯನ್ನು ವಜಾ ಮಾಡಿತ್ತು.

ಆ ತೀರ್ಪಿನಿಂದ ಅಸಮಧಾನಗೊಂಡ ವಾದಿಯು ಮೇಲ್ಮನವಿಯನ್ನು ಸಲ್ಲಿಸಿ ಪ್ರಶ್ನಿತ ತೀರ್ಪಿನ ಕಾನೂನುಬದ್ಧತೆಯನ್ನು ಮತ್ತು ಸರಿಯಾದತೆಯನ್ನು ಪ್ರಶ್ನಿಸಿ ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಕಲಂ 16ಕ್ಕೆ ತಿದ್ದುಪಡಿ ಕಾಯಿದೆ 2018ರ ಮೂಲಕ ಆದ ತಿದ್ದುಪಡಿಯ ಬಳಿಕ ಈಗ ವಾದಿಯು ತಾನು ಕರಾರಿನ ತನ್ನ ಭಾಗವನ್ನು ನಿರ್ವಹಿಸಲು ಸಿದ್ದ ಮತ್ತು ಇಚ್ಛೆಯುಳ್ಳವನು ಎನ್ನುವ ಬಗ್ಗೆ ವಾದಪತ್ರದಲ್ಲಿ ಹೇಳಬೇಕಾಗಿರುವುದಿಲ್ಲ ಮತ್ತು ಕೇವಲ ಸಾಬೀತು ಮಾಡುವುದು ಸಾಕಾಗುತ್ತದೆ. ಮೇಲ್ಮನವಿದಾರ/ವಾದಿಯ ಪ್ರಕಾರ ತಾನು ಸಿದ್ದನಿರುವುದು ಮತ್ತು ಇಚ್ಛೆಯುಳ್ಳವನಾಗಿರುವ ಬಗ್ಗೆ ಸಾಕಷ್ಟು ಸಾಕ್ಷ್ಯಗಳು ಇದ್ದರೂ ವಿಚಾರಣಾ ನ್ಯಾಯಾಲಯ ಅದನ್ನು ಪರಿಗಣಿಸಿರುವುದಿಲ್ಲ. ಮೇಲ್ಮನವಿದಾರ/ವಾದಿಯು ಪರ್ಯಾಯವಾಗಿ ತಾನು ಕರಾರಿನ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ಸಿದ್ದನಿರುವುದು ಮತ್ತು ಇಚ್ಛೆಯುಳ್ಳವನಾಗಿರುವುದು ಸಾಬೀತಾಗದಿದ್ದರೂ ಮತ್ತು ವಾದಿಯು ನಿರ್ದಿಷ್ಟ ಪರಿಪಾಲನೆಯ ಡಿಕ್ರಿಗೆ ಅರ್ಹನಿಲ್ಲದಿರುವುದು ಕಂಡು ಬಂದರೂ ಕೂಡ ವಿಚಾರಣಾ ನ್ಯಾಯಾಲಯವು ದಾವಾವನ್ನು ವಜಾ ಮಾಡಿರುವುದು ಸಮರ್ಥನೀಯವಲ್ಲ ಯಾಕೆಂದರೆ ವಾದಿಯು ನಿರ್ದಿಷ್ಟ ಪರಿಪಾಲನಾ ಡಿಕ್ರಿಗೆ ಅರ್ಹನಿಲ್ಲವಾದರೆ ಆತನು ಮುಂಗಡ ಖರೀದಿ ಹಣದ ಮರುಪಾವತಿಯ ಪರಿಹಾರವನ್ನು ಪಡೆಯಲು ಅರ್ಹನಿರುತ್ತಾನೆ. ಮೇಲ್ಮನವಿದಾರ/ವಾದಿಯು ಮುಂದುವರಿದು ವಾದಿಯು ವಾದಪತ್ರದಲ್ಲಿ ಮುಂಗಡ ಖರೀದಿ ಹಣದ ಮರುಪಾವತಿಯ ಪರಿಹಾರವನ್ನು ಪರ್ಯಾಯವಾಗಿ ಕೇಳದೇ ಇದ್ದರೂ ಕೂಡ ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ VII ನಿಯಮ 7ನ್ನು ಉಲ್ಲೇಖಿಸಿ ವಿಚಾರಣಾ ನ್ಯಾಯಾಲಯವು ಆ ಪರಿಹಾರವನ್ನು ನೀಡಬಹುದು, ಯಾಕೆಂದರೆ ನಿರ್ದಿಷ್ಟ ಪರಿಪಾಲನಾ ಪರಿಹಾರಕ್ಕಿಂತ ಮುಂಗಡ ಹಣ ಮರುಪಾವತಿಯ ಪರಿಹಾರ ಕಡಿಮೆ

ಪರಿಹಾರವಾಗಿರುತ್ತದೆ. ಆ ಕಾರಣದಿಂದ ಮೇಲ್ಮನವಿದಾರ/ವಾದಿಯು ಪ್ರಶ್ನಿತ ತೀರ್ಪನ್ನು ರದ್ದುಗೊಳಿಸಿ ದಾವಾವನ್ನು ಡಿಕ್ರಿ ಮಾಡಲು ಕೋರಿರುತ್ತಾರೆ.

ಆದರೆ, ಪ್ರಶ್ನಿತ ತೀರ್ಪನ್ನು ಸಮರ್ಥನೆ ಮಾಡುತ್ತಾ ಎದುರುದಾರ/ಪ್ರತಿವಾದಿಯು ನಿರ್ದಿಷ್ಟ ಪರಿಹಾರ ಅಧಿನಿಯಮ, 1963ಕ್ಕೆ ತಿದ್ದುಪಡಿ ಕಾಯಿದೆ 2018ರ ಮೂಲಕ ಆದಂತ ತಿದ್ದುಪಡಿಯು ಈ ದಾವೆಗೆ ಅನ್ವಯವಾಗುವುದಿಲ್ಲ, ಯಾಕೆಂದರೆ ತಿದ್ದುಪಡಿ ಕಾಯಿದೆ, 2018 ಜಾರಿಗೆ ಬರುವ ಮೊದಲೆ ಖರೀದಿ ಕರಾರು ಪತ್ರವಾಗಿರುವುದರಿಂದ ಅದು ಪೂರ್ವಾನ್ವಯವಾಗುವುದಿಲ್ಲ. ಆದುದರಿಂದ ವಿಚಾರಣಾ ನ್ಯಾಯಾಲಯವು ವಾದಿಯು ಸಿದ್ದನಿರುವುದು ಮತ್ತು ಇಚ್ಛೆಯುಳ್ಳವನಾಗಿರುವ ಬಗ್ಗೆ ವಾದಪತ್ರದಲ್ಲಿ ನಿರ್ದಿಷ್ಟವಾಗಿ ಹೇಳಿಲ್ಲವಾದ್ದರಿಂದ ಅದನ್ನು ಒಪ್ಪಿಕೊಳ್ಳಲು ಆಗುವುದಿಲ್ಲ ಎಂದು ಹೇಳುವುದು ಸರಿಯಾಗಿಯೇ ಇರುತ್ತದೆ. ಎದುರುದಾರ/ಪ್ರತಿವಾದಿಯು ಮುಂದುವರಿದು ವಾದಿಯು ಖರೀದಿ ಮುಂಗಡ ಹಣವನ್ನು ಮರುಪಾವತಿಯ ಪರಿಹಾರವನ್ನು ಪರ್ಯಾಯ ಪರಿಹಾರವಾಗಿ ನಿರ್ದಿಷ್ಟವಾಗಿ ಕೇಳದೇ ಇದ್ದಾಗ ವಿಚಾರಣಾ ನ್ಯಾಯಾಲಯ ಅಂತಹ ಪರಿಹಾರವನ್ನು ಕೊಡಲು ಆಗುವುದಿಲ್ಲ, ಯಾಕೆಂದರೆ ಯಾವುದೇ ನ್ಯಾಯಾಲಯ ಕೇಳದೇ ಇರುವ ಪರಿಹಾರವನ್ನು ಕೊಡಲು ಸಾಧ್ಯವಿರುವುದಿಲ್ಲ. ಎದುರುದಾರ/ಪ್ರತಿವಾದಿಯು ಮುಂದುವರಿದು ನಿರ್ದಿಷ್ಟ ಪರಿಹಾರ ಕಾಯಿದೆ, 1963ರ ಕಲಂ 22(2)ರ ಪ್ರಕಾರ ಮುಂಗಡ ಹಣ ಮರುಪಾವತಿಯ ಪರಿಹಾರವನ್ನು ಪರ್ಯಾಯ ಪರಿಹಾರವಾಗಿ ಕೇಳದೇ ಇದ್ದಾಗ ಅದನ್ನು ನೀಡಲು ಆಗುವುದಿಲ್ಲ. ಆದುದರಿಂದ ಎದುರುದಾರ/ಪ್ರತಿವಾದಿಯು ಮೇಲ್ಮನವಿಯನ್ನು ಖರ್ಚು ಸಹಿತ ವಜಾ ಮಾಡಲು ಕೋರಿರುತ್ತಾರೆ.

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ಕ್ಕೆ ತಿದ್ದುಪಡಿ ಕಾಯಿದೆ 2018ರ ಮೂಲಕ ಆದ ತಿದ್ದುಪಡಿ ಮತ್ತು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು **ಶ್ರೀಮತಿ ಕಟ್ಟಾ ಸುಜಾತ ರೆಡ್ಡಿ ಮತ್ತು ಇನ್ನೊಬ್ಬರು ವಿರುದ್ಧ ಸಿದ್ದಾಂಶೆಟ್ಟಿ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ (ಸಿವಿಲ್ ಅಪೀಲ್ ನಂ.5822/2022)** ಪ್ರಕರಣದಲ್ಲಿನ ತೀರ್ಪನ್ನು ಗಮನದಲ್ಲಿರಿಸಿ ಈ ಮೇಲ್ಮನವಿಯನ್ನು ತೀರ್ಮಾನಿಸಿ.

******

## HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## MAIN WRITTEN EXAMINATION FOR RECRUITMENT TO THE POST OF DISTRICT JUDGES
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗೆ ನೇಮಕಾತಿಯ ಮುಖ್ಯ ಲಿಖಿತ ಪರೀಕ್ಷೆ

## CRIMINAL LAW
ಅಪರಾಧಿಕ ಕಾನೂನು

## QUESTION PAPER
ಪ್ರಶ್ನೆ ಪತ್ರಿಕೆ

**Date: 05.03.2023** — **Max. Marks: 150**
ದಿನಾಂಕ: 05.03.2023 — ಗರಿಷ್ಠ ಅಂಕಗಳು: 150

**TIME: 2.00 pm to 5.00 pm**
ಸಮಯ: ಮಧ್ಯಾಹ್ನ 2.00 ರಿಂದ 5.00 ಘಂಟೆ

**INSTRUCTIONS TO THE CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು:

1) The candidates should note Rule 5(b) of the Karnataka Judicial Service (Recruitment) (Amendment) Rules, 2016 that reads as under:

***Main Examination:***

***The Competitive Written Examination for recruitment of District Judges shall consist of:-***

***(i) Written Examination of two papers each of three hours duration with 150 maximum marks of each paper-one in Civil Law and another in Criminal Law.***

***(ii) It is compulsory for all candidates to answer at least one of the papers in English language and in so far as the other paper is concerned, it shall be optional for the candidates to answer the same either in English or in Kannada in which event the said paper shall be answered entirely in the language in which option is exercised.***

1) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು 2016ರ ನಿಯಮ 5(ಬಿ)ಯನ್ನು ಈ ಕೆಳಗಿನಂತೆ ಓದಲಾಗುವುದು ಎಂದು ಅಭ್ಯರ್ಥಿಗಳು ಗಮನಿಸತಕ್ಕದ್ದು:

*ಮುಖ್ಯ ಪರೀಕ್ಷೆ:*

*ಜಿಲ್ಲಾ ನ್ಯಾಯಾಧೀಶರ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ಒಳಗೊಂಡಿದ್ದು:-*

(i) *ಲಿಖಿತ ಪರೀಕ್ಷೆಯು ಎರಡು ಪತ್ರಿಕೆಯದಾಗಿದ್ದು ತಲಾ ಮೂರು ಗಂಟೆ ಅವಧಿಯ ಪ್ರತಿ ಪತ್ರಿಕೆಯು 150 ಗರಿಷ್ಟ ಅಂಕಗಳು ಉಳ್ಳದ್ದು – ಒಂದು ದಿವಾಣಿ ಕಾನೂನು ಮತ್ತೊಂದು ಅಪರಾಧಿಕ ಕಾನೂನುದಾಗಿರುತ್ತದೆ.*

(ii) *ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಕನಿಷ್ಟ ಪಕ್ಷ ಒಂದು ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕಾಗುವುದು ಮತ್ತು ಮತ್ತೊಂದು ಪತ್ರಿಕೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ, ಆ ಸಂದರ್ಭದಲ್ಲಿ ಆ ಪತ್ರಿಕೆಯನ್ನು ಪೂರ್ತಿ ಆಯ್ಕೆ ಮಾಡಿದ ಭಾಷೆಯಲ್ಲಿ ಉತ್ತರಿಸತಕ್ಕದ್ದು.*

*2) If there is any difference in the question in English language and Kannada language, the question framed in English language shall prevail.*

*ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.*

*3) Write your register number only on the cover page of the answer book in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.*

*ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.*

**1. Frame the appropriate charge for trial of accused persons for following offences, by assuming the date and place of incident and other necessary facts:** **15 Marks**

Puttur police have filed the charge sheet by alleging that the accused persons have committed the offences punishable under

Sections ______, ______, ______, ______, ______ of Indian Penal Code. It is alleged in the charge sheet that the accused have trespassed into the house of one Sundara and accused No.1 stabbed said Sundara with knife, due to which he sustained fatal injuries and died at the spot and accused No.2 assaulted the wife of said Sundara with long, due to which, she sustained grievous injuries and there by attempted to murder her and accused No.3 dragged the daughter of said Sundara by holding her saree and tore her blouse, with an intention to outrage her modesty.

**Note: Provisions of law, which are kept blank, shall be stated in the charge.**

**ಈ ಕೆಳಕಂಡ ದೋಷಾರೋಪಣ ಪತ್ರದ ಆಧಾರದ ಮೇಲೆ ಘಟನೆಯ ದಿನಾಂಕ ಮತ್ತು ಸ್ಥಳ ಮತ್ತು ಇತರ ಅಗತ್ಯ ಸಂಗತಿಗಳನ್ನು ಊಹಿಸಿಕೊಂಡು ಆರೋಪಿತರ ವಿರುದ್ಧ ಸೂಕ್ತ ದೋಷಾರೋಪಣೆಯನ್ನು ರೂಪಿಸಿ:** **15** ಅಂಕಗಳು

ಪುತ್ತೂರು ಪೋಲಿಸರು ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ ______, ______, ______, ______, ______ರ ಅಡಿಯಲ್ಲಿ ಅಪರಾಧವೆಸಗಿದ್ದಾನೆ ಎಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು. ಆರೋಪಿತರು ಓರ್ವ ಸುಂದರನ ಮನೆಗೆ ಅತಿಕ್ರಮವಾಗಿ ಪ್ರವೇಶಿಸಿ ಒಂದನೇ ಆರೋಪಿಯು ಸುಂದರನಿಗೆ ಚಾಕುವಿನಿಂದ ಇರಿದ ಕಾರಣ ಆತನಿಗೆ ಮಾರಣಾಂತಿಕ ಗಾಯವಾಗಿ ಆತ ಸ್ಥಳದಲ್ಲಿಯೇ ಮೃತಪಟ್ಟಿದ್ದ ಮತ್ತು 2ನೇ ಆರೋಪಿಯು ಆ ಸುಂದರನ ಹೆಂಡತಿಗೆ ಮಚ್ಚಿನಿಂದ ಹೊಡೆದು ಹಲ್ಲೆ ಮಾಡಿದ್ದು ಆಕೆಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಮತ್ತು ಆ ಮೂಲಕ ಆಕೆಯನ್ನು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದು ಮತ್ತು 3ನೇ ಆರೋಪಿಯು ಆ ಸುಂದರನ ಮಗಳ ಸೀರೆ ಹಿಡಿದು ಎಳೆದಾಡಿ ಮತ್ತು ಆಕೆಯ ರವಿಕೆಯನ್ನು ಹರಿದು ಹಾಕಿ ಆಕೆಯ ಮಾನಭಂಗ ಮಾಡುವ ಪ್ರಯತ್ನ ಮಾಡಿದ್ದರು ಎಂದು ದೋಷಾರೋಪಣಾ ಪಟ್ಟಿಯಲ್ಲಿ ಆರೋಪಿಸಲಾಗಿತ್ತು.

**ಸೂಚನೆ: ಖಾಲಿ ಬಿಟ್ಟಿರುವ ಕಾನೂನಿನ ನಿಬಂಧನೆಗಳನ್ನು ದೋಷಾರೋಪಣೆಯಲ್ಲಿ ನಮೂದು ಮಾಡತಕ್ಕದ್ದು.**

**2. Translate the following passage as extracted from a Judgment to Kannada language:** **15 Marks**

ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ. 15 ಅಂಕಗಳು

So far as these accused committing the offences punishable under Section 302 and 201 of Indian Penal Code, prosecution case rest on circumstantial evidence. There is no direct evidence or version of eye witnesses to prove the allegations levelled against the accused. It is well established principle of law that when the prosecution relies upon the circumstantial evidence to bring home the guilt of the accused, heavy burden lies upon them to connect all the circumstances which points finger towards the guilt of the accused. On the basis of the various decisions of the Hon'ble Supreme Court, rule relating to appreciation and accepting the circumstantial evidence can be summarized as follows:

1. When the prosecution rely upon circumstantial evidence, each circumstances relied upon by the prosecution must be established by cogent and reliable evidence.

2. The circumstances relied upon by the prosecution must be such that it cannot be explained on any other hypothesis, except the guilt of the accused.

**3. Translate the following passage as extracted from a deposition to English language:** **15 Marks**

ಈ ಕೆಳಕಂಡ ಸಾಕ್ಷಿ ಹೇಳಿಕೆಯ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ: 15 ಅಂಕಗಳು

<u>ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

ನನ್ನ ಜನನ ದಿನಾಂಕ 14.07.2000. 2016ನೇ ಸಾಲಿನಲ್ಲಿ ನಾನು ಹನುಮಂತಪುರದ ಸರ್ಕಾರಿ ಪ್ರೌಢ ಶಾಲೆಯಲ್ಲಿ 9ನೇ ತರಗತಿ ಓದುತ್ತಿದ್ದೆನು. ಆಗ ನಾನು ಮಠದ ವಸತಿ ಗೃಹದಲ್ಲಿ ಇರುತ್ತಿದ್ದೆನು. ನನಗೆ ಆರೋಪಿ ಗೊತ್ತು ಆತ ನಮ್ಮ ಊರಿನವನು. ನಾನು 9ನೇ ತರಗತಿಯಲ್ಲಿ ಓದುತ್ತಿದ್ದಾಗ ನಾನು

ಮತ್ತು ಆರೋಪಿ ಪರಸ್ಪರ ಪ್ರೀತಿ ಮಾಡುತ್ತಿದ್ದೆವು. ನಮ್ಮ ಮನೆಯವರಿಗೆ ಈ ವಿಚಾರ ತಿಳಿದು ಬಂದು ಅವರು ನನ್ನನ್ನು ಶಾಲೆ ಬಿಡಿಸಿದರು. ನನಗೆ ಇಷ್ಟ ಇಲ್ಲದಿದ್ದರು ನನ್ನ ಮದುವೆಯನ್ನು ರಾಮಪುರದ ಯಲ್ಲಪ್ಪ ಎನ್ನುವವನೊಂದಿಗೆ ಬಲವಂತದಿಂದ ಮಾಡಿಸಿದ್ದರು. ಮದುವೆಯ ನಂತರ ಸುಮಾರು ಆರು ತಿಂಗಳುಗಳ ಕಾಲ ನಾನು ನನ್ನ ಗಂಡನ ಮನೆಯಲ್ಲಿ ಇದ್ದೆನು. ಆ ಅವಧಿಯಲ್ಲಿ ಯಲ್ಲಪ್ಪ ಮತ್ತು ನನ್ನ ನಡುವೆ ದೈಹಿಕ ಸಂಪರ್ಕ ಆಗಿರುವುದಿಲ್ಲ. ಆರು ತಿಂಗಳ ನಂತರ ನಾನು ನನ್ನ ಮನೆಗೆ ವಾಪಸ್ಸು ಬಂದೆನು. ಆ ಬಳಿಕ ಹಿರಿಯರು ಸೇರಿ ನಮ್ಮ ವಿವಾಹವನ್ನು ವಿಚ್ಛೇಧನ ಮಾಡಿದ್ದರು. ಆ ಬಳಿಕ ನಾನು ಆರೋಪಿಯ ಮನೆಗೆ ಹೋಗಿದ್ದೆನು. ಆರೋಪಿ ನನ್ನನ್ನು ಅಪಹರಿಸಿಕೊಂಡು ಹೋಗಿಲ್ಲ ಮತ್ತು ನನ್ನ ಮೇಲೆ ಬಲಾತ್ಕಾರವಾಗಿ ಸಂಭೋಗ ಮಾಡಿಲ್ಲ. ನಾನು ಈ ಬಗ್ಗೆ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನನ್ನ ಮನೆಯವರು ನನಗೆ ಬೆದರಿಸಿದ ಕಾರಣ ನಾನು ನ್ಯಾಯಾಲಯದ ಮುಂದೆ ಆರೋಪಿ ನನ್ನನ್ನು ಬೈಕಿನಲ್ಲಿ ಅಪಹರಿಸಿಕೊಂಡು ಹೋಗಿದ್ದ ಮತ್ತು ನನ್ನೊಂದಿಗೆ ದೈಹಿಕ ಸಂಬಂಧ ಮಾಡಿದ್ದ ಎಂದು ನಾನು ನಿಶಾನೆ ಪಿ.1ರಂತೆ ಹೇಳಿಕೆ ಕೊಟ್ಟಿದ್ದೆನು.

**4.** What are the four situations in which culpable homicide will amount to murder? What are the five exceptions by which culpable homicide will not amount to murder? Explain with illustrations. **15 Marks**

ಅಪರಾಧಿಕ ನರಹತ್ಯೆಯು ಕೊಲೆ ಎಂದು ಪರಿಗಣಿಸಲ್ಪಡುವ ನಾಲ್ಕು ಸಂದರ್ಭಗಳು ಯಾವುವು? ಅಪರಾಧಿಕ ನರಹತ್ಯೆಯು ಕೊಲೆ ಎಂದು ಪರಿಗಣಿಸಲಾಗದಿರುವ ಐದು ಅಪವಾದಗಳು ಯಾವುವು? ದೃಷ್ಟಾಂತಗಳೊಂದಿಗೆ ವಿವರಿಸಿ. **15 ಅಂಕಗಳು**

**5.** Describe three provisions of the Indian Evidence Act, 1872, which provides for presumption in respect of commission of serious offences against the Woman. **10 Marks**

ಮಹಿಳೆಯ ವಿರುದ್ಧ ಗಂಭೀರ ಅಪರಾಧಗಳನ್ನು ಎಸಗಿರುವ ಬಗ್ಗೆ ಪೂರ್ವಭಾವನೆ ಹೊಂದಲು ಇರುವ ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಮೂರು ನಿಬಂಧನೆಗಳನ್ನು ವಿವರಿಸಿ. 10 ಅಂಕಗಳು

**10 Marks**

6. Explain the Law relating to filing of Appeals under the Code of Criminal Procedure, 1973, with reference to the following:

a) Different kinds of Appeal.
b) Powers of the Appellate Court.
c) Period of Limitation under the Limitation Act, 1963 to file the Criminal Appeals.

ದಂಡ ಪ್ರಕ್ರಿಯಾ ಸಂಹಿತೆ, 1973ರ ಅಡಿಯಲ್ಲಿ ಮೇಲ್ಮನವಿ ಸಲ್ಲಿಸುವ ಬಗ್ಗೆ ಇರುವ ಕಾನೂನುಗಳನ್ನು ಈ ಕೆಳಗಿನವುಗಳನ್ನು ಉಲ್ಲೇಖಿಸಿ ವಿವರಿಸಿ. **10 ಅಂಕಗಳು**

ಎ) ಬೇರೆ ಬೇರೆ ನಮೂನೆಯ ಮೇಲ್ಮನವಿಗಳು.

ಬಿ) ಮೇಲ್ಮನವಿ ನ್ಯಾಯಾಲಯದ ಅಧಿಕಾರಗಳು.

ಸಿ) ಕಾಲಮಿತಿ ಅಧಿನಿಯಮ, 1963ರ ಅಡಿಯಲ್ಲಿ ಅಪರಾಧಿಕ ಮೇಲ್ಮನವಿಗಳನ್ನು ಸಲ್ಲಿಸಲು ಇರುವ ಕಾಲಮಿತಿ

**7.** State the meaning of followings important terms, as described in the respective Acts: **10 Marks**

a) "narcotic drugs" under the Narcotic Drugs and Psychotropic Substances Act, 1985.

b) "public servant" under the Prevention of Corruption Act, 1988.

c) "child" under the Protection of Children from Sexual Offences Act, 2012.

d) "atrocity" under the Scheduled Castes and Schedules Tribes (Prevention of Atrocities) Act, 1989.

e) "Holder in due course" under the Negotiable Instruments Act, 1881.

ಈ ಕೆಳಗೆ ನಮೂದಿಸಿರುವ ಪ್ರಮುಖ ಪದಗಳ ಅರ್ಥಗಳನ್ನು ಆಯಾ ಕಾಯಿದೆಗಳಲ್ಲಿ ವಿವರಿಸಿದಂತೆ ತಿಳಿಸಿ: **10 ಅಂಕಗಳು**

ಎ) ಮಾದಕ ದ್ರವ್ಯ ಮತ್ತು ಮನೋವಿಕೃತ ವಸ್ತುಗಳ ಅಧಿನಿಯಮ, 1985 ಅಡಿಯಲ್ಲಿ "ಮಾದಕ ದ್ರವ್ಯ"

ಬಿ) ಭ್ರಷ್ಟಚಾರಾ ನಿರ್ಮೂಲನಾ ಅಧಿನಿಯಮ, 1988ರ ಅಡಿಯಲ್ಲಿ "ಸಾರ್ವಜನಿಕ ಅಧಿಕಾರಿ"

ಸಿ) ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯಿದೆ, 2012ರ ಅಡಿಯಲ್ಲಿ "ಮಗು"

ಡಿ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯಗಳ ನಿಷೇಧ) ಕಾಯಿದೆ, 1989ರ ಅಡಿಯಲ್ಲಿ "ದೌರ್ಜನ್ಯ"

ಇ) ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ ಅಡಿಯಲ್ಲಿ "ತತ್ಕಾಲದಲ್ಲಿ ಸ್ವಾಧೀನದಾರ"

**8.** Who is competent to grant sanction for prosecution of a public servant under the Prevention of Corruption Act, 1988? Discuss with reference to relevant provisions and leading decisions on the subject. **10 Marks**

ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ, 1988ರ ಅಡಿಯಲ್ಲಿ ಸಾರ್ವಜನಿಕ ಅಧಿಕಾರಿಯ ವಿರುದ್ಧ ಅಭಿಯೋಜನೆಯನ್ನು ನಡೆಸಲು ಮಂಜೂರಾತಿ ನೀಡಲು ಸಮರ್ಥರು ಯಾರು? ಈ ವಿಷಯದ ಬಗ್ಗೆ ಸಂಬಂಧಪಟ್ಟ ನಿಬಂಧನೆಗಳನ್ನು ಮತ್ತು ಪ್ರಮುಖ ತೀರ್ಪುಗಳನ್ನು ಉಲ್ಲೇಖಿಸಿ ಚರ್ಚಿಸಿ. **10 ಅಂಕಗಳು**

**9.** What are the procedures to be followed by the Criminal Courts when the accused is absconding? Explain by referring to the relevant provisions of the Code of Criminal Procedure 1973. **10 Marks**

ಆರೋಪಿಯು ತಲೆಮರೆಸಿಕೊಂಡಿರುವಾಗ ಕ್ರಿಮಿನಲ್ ನ್ಯಾಯಾಲಯಗಳು ಅನುಸರಿಸಬೇಕಾದ ಪ್ರಕ್ರಿಯೆಗಳು ಯಾವುವು? ದಂಡ ಪ್ರಕ್ರಿಯಾ ಸಂಹಿತೆ, 1973ರ ಸಂಬಂಧಪಟ್ಟ ನಿಬಂಧನೆಗಳನ್ನು ಉಲ್ಲೇಖಿಸಿ ವಿವರಿಸಿ. **10 ಅಂಕಗಳು**

**10.** State the specific provision of law of the offence which is made out under the following circumstances: **1 X 5 = 5 Marks**

a) A Public servant having resources or property disproportionate to his known sources of income

b) Involving in any activities connected with the proceeds of crime and projecting it as untainted property.

c) Consumption of any narcotic drugs.

d) Misconduct in public place by drunken person.

e) Using or driving a vehicle by violating the permit conditions.

ಈ ಕೆಳಗಿನ ಸಂದರ್ಭಗಳಲ್ಲಿ ಉಂಟಾದ ಅಪರಾಧಗಳ ನಿರ್ದಿಷ್ಟ ಕಾನೂನಿನ ನಿಬಂಧನೆಗಳನ್ನು ತಿಳಿಸಿ: **1 X 5 = 5 ಅಂಕಗಳು**

ಎ) ಓರ್ವ ಸಾರ್ವಜನಿಕ ಅಧಿಕಾರಿಯ ಬಳಿ ಆತನಿಗೆ ತಿಳಿದಿರುವ ಆದಾಯದ ಮೂಲಕ್ಕಿಂತಲು ಅಸಮಾನವಾಗಿ ಸಂಪನ್ಮೂಲ ಅಥವಾ ಆಸ್ತಿ ಇರುವುದು.

ಬಿ) ಅಪರಾಧದಿಂದ ಗಳಿಸಿದ ಆದಾಯಕ್ಕೆ ಸಂಬಂಧಿಸಿದ ಯಾವುದೇ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಮತ್ತು ಅದನ್ನು ಕಳಂಕರಹಿತ ಆಸ್ತಿ ಎಂದು ಬಿಂಬಿಸುವುದು.

ಸಿ) ಯಾವುದೇ ಮಾದಕ ದ್ರವ್ಯವನ್ನು ಸೇವಿಸುವುದು.

ಡಿ) ಸಾರ್ವಜನಿಕ ಸ್ಥಳದಲ್ಲಿ ಕುಡಿದು ಅಮಲೇರಿದ ವ್ಯಕ್ತಿಯಿಂದ ದುರ್ವರ್ತನೆ.

ಇ) ಪರವಾನಗಿ ನಿಯಮಗಳನ್ನು ಉಲ್ಲಂಘಿಸಿ ವಾಹನವನ್ನು ಉಪಯೋಗಿಸುವುದು ಅಥವಾ ಚಲಾಯಿಸುವುದು.

**11.** Write short note on **ANY TWO** of the followings subjects: **5 X 2= 10 Marks**

a) Procedure for awarding the compensation to the victims under Section 357A and 357B of the Code of Criminal Procedure 1973.

b) Procedure of search under Section 50 of the Narcotic Drugs and Psychotropic Substances Act, 1985.

c) Procedure for recording the Statement of Child under the Protection of Children from Sexual Offences Act, 2012

ಈ ಕೆಳಗಿನ ವಿಷಯಗಳ ಪೈಕಿ **ಯಾವುದಾದರೂ ಎರಡಕ್ಕೆ** ಸಂಬಂಧಿಸಿದಂತೆ ಸಂಕ್ಷಿಪ್ತ ಟಿಪ್ಪಣಿಗಳನ್ನು ಬರೆಯಿರಿ: **5 X 2 = 10 ಅಂಕಗಳು**

ಎ) ದಂಡ ಪ್ರಕ್ರಿಯಾ ಸಂಹಿತೆ, 1973ರ ಕಲಂ 357ಎ ಮತ್ತು 357ಬಿ ಅಡಿಯಲ್ಲಿ ನೊಂದ ವ್ಯಕ್ತಿಗಳಿಗೆ ಪರಿಹಾರವನ್ನು ನೀಡುವ ಪ್ರಕ್ರಿಯೆ.

ಬಿ) ಮಾದಕ ದ್ರವ್ಯ ಮತ್ತು ಮನೋವಿಕೃತ ವಸ್ತುಗಳ ಅಧಿನಿಯಮ, 1985ರ ಕಲಂ 58ರ ಅಡಿಯಲ್ಲಿ ಶೋಧನೆ ಮಾಡುವ ಪ್ರಕ್ರಿಯೆ.

ಸಿ) ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯಿದೆ, 2012ರ ಅಡಿಯಲ್ಲಿ ಮಗುವಿನ ಹೇಳಿಕೆಯನ್ನು ದಾಖಲು ಮಾಡುವ ಪ್ರಕ್ರಿಯೆ.

**12. Write an order on the bail petition filed by the accused under Sec.438 of the Code of Criminal Procedure, 1973, on the basis of the following facts.** **25 Marks**

On the basis of the complaint lodged by one Laxmana Kambli, the Chikkodi Police have registered the FIR by alleging that the accused has committed the offences punishable under Section ________and _________ of the Indian Penal Code and Section ______, and _______ of the Scheduled Castes and the Scheduled Tribes (Prevention of Atrocities) Act, 1989.

It was alleged in the complaint that on 01.02.2022 at about 7.00 p.m. when the complainant, who belongs to a scheduled caste, was in his house, the accused came there and picked up the quarrel with him, dragged him to a public road and tried to assault him with a long and there by attempted to murder him, posed a threat to kill him, insulted and intimidated him by taking the name of his caste, by knowing very well that the complainant belongs to the schedule caste.

The accused filed a petition before the Additional District and Sessions Court and Special Court, Belagavi under Section 438 of the Code of Criminal Procedure, 1973, praying for an anticipatory bail.

The learned Special Public Prosecutor filed objections to the bail petition and contended that the petition filed by the accused/petitioner seeking anticipatory bail is not maintainable. The accused/petitioner has committed a heinous crime against the complainant, who belongs to the Scheduled Caste. Sec. 18 of the Scheduled Castes and the Scheduled Tribes (Prevention of Atrocities) Act, 1989 bars the granting of anticipatory bail to the accused who have committed an offence under the said Act. The alleged offences are punishable with imprisonment for life. The accused/petitioner is required for custodial interrogation. The accused is powerful and he may threaten the prosecution witnesses and tamper the evidence. On all these grounds, the learned Special Public Prosecutor prayed for rejection of the anticipatory bail petition.

In support of his arguments for granting the anticipatory bail, the learned Counsel for the accused relied upon the decision of the Honble Supreme Court in **Dr. Subhash Kashinath Mahajan vs The State of Maharastra (2018) 6 SCC 454.**

Where as, in support of his arguments for rejection of anticipatory bail, the Learned Special Public Prosecutor relied upon the decision of Hon'ble Supreme Court in **Prathvi Raj Chauhan vs Union Of India and others. (WP (C) No.1015/2018, Dated 10.02.2020)**

Decide the petition filed for anticipatory bail in the light of the Section 18A inserted to the Scheduled Castes and Scheduled Tribes (Prevention of Atrocities) Act, 1989 and above decisions relied upon by both the parties.

**Note: Provisions of law, which are kept blank, shall be stated in the order.**

**ಈ ಕೆಳಕಂಡ ಸಂಗತಿಗಳ ಆಧಾರದ ಮೇಲೆ ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 438ರ ಅಡಿಯಲ್ಲಿ ಆರೋಪಿಯು ಸಲ್ಲಿಸಿರುವ ಜಾಮೀನು ಅರ್ಜಿಯ ಮೇಲೆ ಆದೇಶವನ್ನು ಬರೆಯಿರಿ.** **25 ಅಂಕಗಳು**

ಓರ್ವ ಲಕ್ಷ್ಮಣ ಕಾಂಬ್ಳಿ ಎನ್ನುವವರು ಸಲ್ಲಿಸಿದ ದೂರಿನ ಆಧಾರದ ಮೇಲೆ ಚಿಕ್ಕೋಡಿ ಪೋಲೀಸರು ಆರೋಪಿಯು ಭಾರತೀಯ ದಂಡ ಸಂಹಿತೆಯ ಕಲಂ ________ ಮತ್ತು _______ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯಗಳ ನಿಷೇಧ) ಕಾಯಿದೆ 1989ರ ಕಲಂ _______ ಮತ್ತು ________ರ ಅಡಿಯಲ್ಲಿ ಅಪರಾಧವೆಸಗಿದ್ದಾನೆ ಎಂದು ಆರೋಪಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿದ್ದರು.

ಫಿರ್ಯಾದಿಯಲ್ಲಿ ದಿನಾಂಕ 01.02.2022ರಂದು ಸಂಜೆ 7.00 ಗಂಟೆಗೆ ಪರಿಶಿಷ್ಟ ಜಾತಿಗೆ ಸೇರಿದ ಫಿರ್ಯಾದಿಯು ತನ್ನ ಮನೆಯಲಿದ್ದಾಗ ಆರೋಪಿಯು ಅಲ್ಲಿಗೆ ಬಂದು ಫಿರ್ಯಾದಿಯೊಂದಿಗೆ ಜಗಳ ತೆಗೆದು ಆತನನ್ನು ಸಾರ್ವಜನಿಕ ರಸ್ತೆಗೆ ಎಳೆದು ತಂದು ಆತನಿಗೆ ಮಚ್ಚಿನಿಂದ ಹಲ್ಲೆ ಮಾಡಲು ಪ್ರಯತ್ನಿಸಿ ಕೊಲೆಮಾಡಲು ಯತ್ನ ಮಾಡಿದ್ದನು ಮತ್ತು ಆತನಿಗೆ ಕೊಲೆ ಬೆದರಿಕೆ ಹಾಕಿ ಆತ ಪರಿಶಿಷ್ಟ ಜಾತಿಗೆ ಸೇರಿದವನು ಎಂದು ತಿಳಿದು ಆತನ ಜಾತಿಯ ಹೆಸರಿನಿಂದ ಆತನಿಗೆ ಅವಮಾನಿಸಿ ಬೆದರಿಸಿದ್ದನು.

ಆರೋಪಿಯು ಬೆಳಗಾವಿಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಮತ್ತು ವಿಶೇಷ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 438ರ ಅಡಿಯಲ್ಲಿ ನಿರೀಕ್ಷಣಾ ಜಾಮೀನನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದನು.

ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಜಾಮೀನು ಅರ್ಜಿಗೆ ತಕರಾರನ್ನು ಸಲ್ಲಿಸಿ ಆರೋಪಿ/ಅರ್ಜಿದಾರನು ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿ ಊರ್ಜಿತವಾಗುವುದಿಲ್ಲ ಎಂದು ಸಾಧಿಸಿರುತ್ತಾರೆ. ಆರೋಪಿ ಅರ್ಜಿದಾರನು ಪರಿಶಿಷ್ಟ ಜಾತಿಗೆ ಸೇರಿದ ಫಿರ್ಯಾದಿಯ ವಿರುದ್ಧ ಘೋರ ಅಪರಾಧ ಮಾಡಿರುತ್ತಾನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯಗಳ ನಿಷೇಧ) ಕಾಯಿದೆ, 1989ರ ಕಲಂ 18 ಆ ಕಾಯಿದೆಯ ಅಡಿಯಲ್ಲಿ ಆರೋಪವೆಸಗಿದ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡುವುದನ್ನು ಪ್ರತಿಬಂಧಿಸುತ್ತದೆ. ಆರೋಪಿಸಿದ ಆರೋಪವು ಜೀವಾವಧಿ ಶಿಕ್ಷೆಯಿಂದ ಶಿಕ್ಷಾರ್ಹವಾಗಿದೆ. ಆರೋಪಿ/ಅರ್ಜಿದಾರನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಬೇಕಾಗುತ್ತದೆ. ಆರೋಪಿಯು ಬಲಿಷ್ಠನಾಗಿದ್ದು ಆತ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಿ ಸಾಕ್ಷ್ಯವನ್ನು ತಿರುಚುತ್ತಾನೆ. ಈ ಎಲ್ಲಾ ಕಾರಣಗಳಿಂದ ಮಾನ್ಯ ವಿಶೇಷ ಸರ್ಕಾರಿ ಅಭಿಯೊಜಕರು ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಲು ಕೋರಿರುತ್ತಾರೆ.

ಆರೋಪಿ ಪರ ಹಾಜರಾಗಿರುವ ಮಾನ್ಯ ವಕೀಲರು ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡಬೇಕು ಎನ್ನುವ ತನ್ನ ವಾದಕ್ಕೆ ಪೂರಕವಾಗಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು **ಡಾ.ಸುಭಾಷ್ ಕಾಶೀನಾಥ್ ಮಹಾಜನ್ ವಿರುದ್ಧ ಮಹಾರಾಷ್ಟ್ರ ಸರ್ಕಾರ (2018) 6 ಎಸ್.ಸಿ.ಸಿ. 454** ತೀರ್ಪನ್ನು ಉಲ್ಲೇಖಿಸಿರುತ್ತಾರೆ.

ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ನಿರೀಕ್ಷಣಾ ಜಾಮೀನನ್ನು ತಿರಸ್ಕರಿಸಬೇಕು ಎಂಬ ತನ್ನ ವಾದಕ್ಕೆ ಬೆಂಬಲವಾಗಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು **ಪೃಥ್ವಿರಾಜ್ ಚೌಹಾಣ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು (ಡಬ್ಲ್ಯೂ.ಪಿ. (ಸಿ) ನಂ.1015/2018 ದಿನಾಂಕ 10.02.2020)** ತೀರ್ಪನ್ನು ಉಲ್ಲೇಖಿಸಿರುತ್ತಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯಗಳ ನಿಷೇಧ) ಕಾಯಿದೆ 1989ಕ್ಕೆ ಸೇರಿಸಿರುವ ಕಲಂ 18ಎ ಮತ್ತು ಉಭಯ ಪಕ್ಷಗಾರರು ಉಲ್ಲೇಖಿಸಿರುವ ಮೇಲಿನ ತೀರ್ಪುಗಳ ಆಧಾರದ ಮೇಲೆ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ ಅರ್ಜಿಯನ್ನು ತೀರ್ಮಾನಿಸಿ.

**ಸೂಚನೆ: ಖಾಲಿ ಬಿಟ್ಟಿರುವ ಕಾನೂನಿನ ನಿಬಂಧನೆಗಳನ್ನು ಆದೇಶದಲ್ಲಿ ನಮೂದು ಮಾಡತಕ್ಕದ್ದು.**

*******